

ಆ ಬುಗುರಿಯಾಡುವ ಅವನ ಸುಖವ ಕಂಡು ಅವರು ಸುಮ್ಮನೆ ನಗುತ್ತಿದ್ದರು. ಅತ್ತೆ ಅತ್ತೇ ಎಂದು ಬಿದ್ದು ಬೇಡುವೆಯಲ್ಲಾ ನಾವು ನಾಳೆ ಮುದಿ ಕತ್ತೆಯರಾದ ಮೇಲೆ ಏನು ಮಾಡುವೆ ಎಂದು ಕೇಳಿ ಅವನ ರೇಗಿಸುತ್ತಿದ್ದರು. 'ನೀವು ಹೀಗೇ ಆಡ್ತಾ ಇರಿ; ನಾಳೆ ನಾನು ದೊಡ್ಡವನಾದ ಮೇಲೆ ಏನು ಮಾಡ್ತಿನಿ ಗೊತ್ತಾ...' ಎಂದಿದ್ದ. 'ಏನು ಮಾಡ್ತೀಯೋ; ಹೇಳೊ... ನಿನಗೀಗ ತಾನೆ ತುಟಿ ಮೇಲೆ ಕಪ್ಪು ಬಣ್ಣ ಬಂದಿದೆ. ಮೀಸೆ ಬರಲು ಇನ್ನೂ ತುಂಬಾ ದಿನಗಳು ಬೇಕು... ಹೇಳೊ; ಏನು ಮಾಡ್ತೀಯೊ... ಹತ್ತಿರ ಬಾರೋ ನಿನ್ನ ಚಡ್ಡಿ ಕಟ್ಟಿಕೊಡ್ತೀನಿ' ಎಂದು ಅವನ ಕಿರಿ ಅತ್ತೆ ಓಡಾಡಿಸಿ ಮೂಲೆಗೆ ಹಾಕಿ ಚಕ್ಕಳಗುಳಿ ಆಡಿಸಿದ್ದಳು. ಬಿಡಿಸಿಕೊಂಡು ಬಾಗಿಲತ್ತ ಆಚೆ ನಿಂತು ಅವರತ್ತ ನೋಡಿ... 'ನಿಮ್ಮ ಮೂವರನ್ನೂ ಮದುವೆ ಮಾಡ್ಕೋತಿನೀ' ಎಂದು ಓಡಿ ಹೋಗಿದ್ದ. ಅವರು ಅಹಹಾ ಎಂದು ಬೀದಿಯೆ ಮೊಳಗುವಂತೆ ನಕ್ಕಿದ್ದರು. ಕಾಲ ಬಿರಬಿರನೆ ಮುಂದಕ್ಕೆ, ಹಿಂದೆ ಬಿದ್ದವರತ್ತ ನೋಡದೆ ಹೊರಟು ಹೋಗುತ್ತಿತ್ತು. ಒಂದು ದಿನ ಎಂಡಗುಡುಕ ಅವರಪ್ಪ ದೆವ್ವಗಳನ್ನು ಸ್ವರ್ಗಕ್ಕೆ ಕರೆದೊಯ್ಯುವೆ ಎಂದು ಹೇಳಿ ಎತ್ತರದ ಎಂಡದ ಮರ ಏರಿ ಕುಡಿದು ಬಿದ್ದು ಸತ್ತು ಹೋಗಿದ್ದ. ಯಾವ ಒಂದು ದೆವ್ವವೂ ಸಂತಾಪ ಸಭೆಗೆ ಬಂದಿರಲಿಲ್ಲ. ಜನ ತಾವೇ ಸ್ವತಃ ಪಿಶಾಚಿಗಳಂತಾಗಿ ಭೂತ ಪ್ರೇತಗಳ ಅತ್ತ ಬಿಟ್ಟುಬಿಟ್ಟಿದ್ದರು. ಹಾಗೆಯೇ ಒಳ್ಳೆಯವರು ಯಾರು ಕೆಟ್ಟವರು ಯಾರು; ದೇವರು ಯಾರು ಸೈತಾನ ಯಾರು ಎಂಬ ವ್ಯತ್ಯಾಸವೇ ಅಳಿದು ಹೋಗಿತ್ತು. ಅಂತೂ ದುಷ್ಟರು ಬಯಸಿದ್ದೇ ಆಗಿತ್ತು. ಸೂಳೆಯರ ಬಲೆಗೆ ಅತ್ತೆಯರನ್ನು ಕೆಡವಿದ್ದರು. ಏನೋ ಆಗುತ್ತಿದೆ ಎನಿಸಿತ್ತು ಅವನಿಗೆ. ಅತ್ತೆಯರೇ ನೀವೆಲ್ಲಿಗೆ ಹೋಗುವಿರಿ ಎಂದು ಹಿಂಬಾಲಿಸುತ್ತಿದ್ದ. ಕೆನ್ನೆಗೆ ಬಾರಿಸಿ ಶಾಲೆ ಕಲಿತು ದೊಡ್ಡ ಸಾಹೇಬ ಆಗಿ ಕಾರಲ್ಲಿ ಬಾ... ಆಗ ನಮಗೆ ನೀನೇ ಗಂಡ ಮಿಂಡ ಎಲ್ಲ ಎಂದು ಕಳಿಸಿಬಿಟ್ಟಿದ್ದರು. ಊರ ಪಕ್ಕದಲ್ಲೆ ಸೂನಗಳ್ಳಿ ಸಂತೆ ನಡೆಯುತ್ತಿತ್ತು. ಆ ಸಂತೆಯನ್ನೆ ಅವರು ತಮ್ಮ ಮೊದಲ ದಿನಗಳ ದಂಧೆಗೆ ಬಳಸಿಕೊಂಡಿದ್ದರು. ಕೆಲವೊಮ್ಮೆ ವಾರಗಟ್ಟಲೆ ನಾಪತ್ತೆಯಾಗಿರುತ್ತಿದ್ದರು. ಅವನು ಅತ್ತೆಯರ ದಾರಿ ಕಾದು ರೋಸಿಹೋಗುತ್ತಿದ್ದ. ಸಿಟ್ಟಾಗಿ; ಇನ್ನು ಈ ಅತ್ತೆಯರು ಬಂದರೂ ಮಾತಾಡಿಸಬಾರದು ಎಂದು ಕಣ್ಣೀರ ಬಟ್ಟಾಡಿಸುತ್ತಿದ್ದ. ಬಾಗಿಲು ಮುಚ್ಚಿದ್ದ ಅತ್ತೆಯರ ಮನೆಯ ಕೋಳಿಗಳು ಅಲ್ಲೇ ಹಿತ್ತಲ ಬೇಲಿ ಮೆಳೆ ಮೇಲೆ ಕೂತು ದಿನಗಳೆಯುವುದ ನೋಡಲಾರದೆ ಶಾಲೆಗೆ ಓಡಿ ಹೋಗುತ್ತಿದ್ದ. ಅತ್ತೆಯರು ಎಂದೋ ಬಂದು ಹೊರಟು ಹೋಗುತ್ತಿದ್ದರು. ಆ ಸೂನಗಳ್ಳಿ ಸಂತೆಗೂ ಹೋಗಿ ಹುಡುಕಿದ್ದ. ಅವರು ಆ ನೆಲೆಯ ಬಿಟ್ಟು ಪೇಟೆಯ ಗಿರಾಕಿಗಳತ್ತ ವಾಲಿದ್ದರು. ಅಲ್ಲೇ ಎಲ್ಲೋ ಒಂದು ಬಾಡಿಗೆ ಮನೆ ಮಾಡಿಕೊಂಡಿದ್ದಾರೆ